"ಮಧುರ ಮಕ್ಕಳೇ - ಬೇಹದ್ದಿನ ತಂದೆಯಿಂದ ಸದಾ ಸುಖದ ಆಸ್ತಿಯನ್ನು ಪಡೆಯಬೇಕೆಂದರೆ ಏನೆಲ್ಲಾ ಬಲಹೀನತೆಗಳಿವೆ, ಅವುಗಳನ್ನು ತೆಗೆದು ಹಾಕಿ, ಚೆನ್ನಾಗಿ ಓದಿ ಮತ್ತು ಓದಿಸಿ"

ಪ್ರಶ್ನೆ: ತಂದೆ ಸಮಾನ ಸೇವೆಯಲ್ಲಿ ನಿಮಿತ್ತರಾಗಲು ಯಾವ ಮುಖ್ಯ ಗುಣ ಬೇಕು?

ಉತ್ತರ: ಸಹನಶೀಲತೆಯ ಗುಣ. ದೇಹದ ಮೇಲೆ ಅತಿಯಾದ ಮೋಹ ಇಡಬಾರದು. ಯೋಗ ಬಲದಿಂದ ಕೆಲಸ ತೆಗೆದುಕೊಳ್ಳಬೇಕು. ಯಾವಾಗ ಯೋಗಬಲದಿಂದ ಎಲ್ಲಾ ಖಾಯಿಲೆಗಳು ಸಮಾಪ್ತಿಯಾಗುತ್ತದೆ. ಆಗ ತಂದೆ ಸಮಾನ ನಿಮಿತ್ತರಾಗಲು ಸಾಧ್ಯವಿದೆ.

ಪ್ರಶ್ನೆ: ಯಾವ ಮಹಾ ಪಾಪ ಆಗುವುದರಿಂದ ಬುದ್ಧಿಯ ಬೀಗ ಬಂಧಿಸಲ್ಪಡುತ್ತದೆ?

ಉತ್ತರ: ತಂದೆಯವರಾಗಿ ಒಂದುವೇಳೆ ತಂದೆಯ ನಿಂದನೆಯನ್ನು ಮಾಡಿಸಿದರೆ, ಆಜ್ಞಾಕಾರಿ, ಏಕನಿಷ್ಠ ಆಗುವ ಬದಲು ಯಾವುದೇ ಭೂತಕ್ಕೆ ವಶೀಭೂತರಾಗಿ ಡಿಸ್ ಸರ್ವೀಸ್(ಸೇವಾ ಭಂಗ) ಮಾಡಿದರೆ, ವಿಕಾರದಲ್ಲಿ ಹೋಗುವುದನ್ನು ಬಿಡುವುದಿಲ್ಲವೆಂದರೆ ಈ ಮಹಾ ಪಾಪದಿಂದ ಬುದ್ಧಿಗೆ ಬೀಗ ಬಿದ್ದು ಬಿಡುತ್ತದೆ.

ಗೀತೆ: ನನ್ನ ಮನದ ಬಾಗಿಲಲ್ಲಿ ಯಾರು ಬಂದರು............

ಓಂ ಶಾಂತಿ. ಭಗವಾನುವಾಚ-ಮಕ್ಕಳು ತಿಳಿದಿದ್ದೀರಿ ನಿರಾಕಾರ ಪತಿತಪಾವನ, ಜ್ಞಾನ ಸಾಗರನಾಗಿದ್ದಾರೆ, ಅವರು ಕುಳಿತು ಆತ್ಮಗಳಿಗೆ ಓದಿಸುತ್ತಾರೆ. ಶಾಸ್ತ್ರಗಳನ್ನು ಓದುವುದು- ಇದೆಲ್ಲವೂ ಭಕ್ತಿ ಮಾರ್ಗವಾಗಿದೆ. ಸತ್ಯಯುಗ, ತ್ರೇತಾದಲ್ಲಿ ಶಾಸ್ತ್ರಗಳನ್ನು ಓದುವುದಿಲ್ಲ, ದ್ವಾಪಾರದಿಂದ ಓದುತ್ತಾರೆ. ಭಗವಂತ ಶಾಸ್ತ್ರಗಳನ್ನು ಮಾಡಿಲ್ಲ. ಮನುಷ್ಯರು ಮಾಡಿದ್ದಾರೆ. ವ್ಯಾಸ ಭಗವಂತನೂ ಮಾಡಿಲ್ಲ. ವ್ಯಾಸನಂತು ಮನುಷ್ಯರಾಗಿದ್ದಾರೆ. ನಿರಾಕಾರ ಪರಮಪಿತ ಪರಮಾತ್ಮನನ್ನು ಎಲ್ಲರೂ ನೆನಪು ಮಾಡುತ್ತಾರೆ. ಗೀತೆಯ ಭಗವಂತ ಶ್ರೀಕೃಷ್ಣನೆಂದು ತಿಳಿದಿರುವುದು ದೊಡ್ಡ ತಪ್ಪಾಗಿದೆ. ತಂದೆ ತಿಳಿಸುತ್ತಾರೆ-ನಾನು ಜ್ಞಾನ ಸಾಗರನಾಗಿದ್ದೇನೆ, ಶ್ರೀಕೃಷ್ಣನಲ್ಲ. ಈ ಬೇಹದ್ದಿನ ಪ್ರಪಂಚದ ಚರಿತ್ರೆ-ಭೂಗೋಳವನ್ನು ಆದಿಯಿಂದ ಅಂತ್ಯದವರೆಗೆ ತಂದೆಯೇ ತಿಳಿದುಕೊಂಡಿದ್ದಾರೆ. ಹೇಗೆ ಆತ್ಮಗಳು ಇಲ್ಲಿಗೆ ಬರುತ್ತಾರೆ ಎಂಬುದನ್ನು ತಂದೆಯೇ ತಿಳಿದಿದ್ದಾರೆ. ಮೂಲವತನ, ಸೂಕ್ಷ್ಮ ವತನ ಮತ್ತು ಇದಾಗಿದೆ ಸ್ಥೂಲವತನ. ಈ ಸೃಷ್ಟಿಚಕ್ರ ಹೇಗೆ ಸುತ್ತುತ್ತದೆ ಎಂಬ ಜ್ಞಾನವನ್ನು ನಾನು ನಿರಾಕಾರ ಬೀಜರೂಪ ಜ್ಞಾನ ಸಾಗರನನ್ನು ಬಿಟ್ಟರೆ ಮತ್ತೆ ಯಾರೂ ಸಹ ತಿಳಿಸಿಕೊಡಲು ಸಾಧ್ಯವಿಲ್ಲ. ಭಕ್ತಿ ಪ್ರಾರಂಭವಾದ ಮೇಲೆ ಭಕ್ತರೇ ಕುಳಿತು ಶಾಸ್ತ್ರಗಳನ್ನು ರಚಿಸುತ್ತಾರೆ. ಈ ಶಾಸ್ತ್ರಗಳು ಮತ್ತೆ ಬರೆಯಲ್ಪಡುತ್ತದೆ. ಶಾಸ್ತ್ರಗಳನ್ನು ಬರೆಯುವುದು ಎಂದಿಗೂ ನಿಂತು ಹೋಗುವುದಿಲ್ಲ. ಭಾರತದ ಮೂಲ ಆದಿ ಸನಾತನ ದೇವೀ ದೇವತಾ ಧರ್ಮವಾಗಿದೆ. ಸತ್ಯಯುಗದ ಪ್ರಾರಂಭದಲ್ಲಿ ದೇವೀ ದೇವತೆಗಳ ರಾಜ್ಯವಿತ್ತು. ಭಾರತವಾಸಿಗಳು ತಮ್ಮ ಧರ್ಮವನ್ನು ಮರೆತಿದ್ದಾರೆ. ಯಾರು ಪಾವನರಾಗಿದ್ದರು, ಅವರು ಈಗ ಪತಿತರಾಗಿದ್ದಾರೆ. ಆದ್ದರಿಂದ ಭಗವಂತ ತಿಳಿಸುತ್ತಾರೆ ನಾನು ಬಂದು ನಿಮ್ಮನ್ನು ಪತಿತ ಮನುಷ್ಯರಿಂದ ಪಾವನ ದೇವತೆಗಳನ್ನಾಗಿ ಮಾಡುತ್ತೇನೆ. ನಾವು ದೇವತೆಗಳಾಗಲು ಓದುತ್ತಿದ್ದೇವೆ ಎಂಬುದನ್ನು ನೀವೂ ತಿಳಿದಿದ್ದೀರಿ. ಮನುಷ್ಯರಿಂದ ದೇವತೆಯನ್ನಾಗಿ ತಂದೆಯನ್ನು ಬಿಟ್ಟು ಬೇರೆ ಯಾರೂ ಮಾಡಲು ಸಾಧ್ಯವಿಲ್ಲ, ಏಕೆಂದರೆ ಇಲ್ಲಿ ಎಲ್ಲರು ಪತಿತ ಭ್ರಷ್ಟಾಚಾರಿಗಳಾಗಿದ್ದಾರೆ. ಅವರು ಮತ್ತೆ ಪಾವನ ಶ್ರೇಷ್ಠಾಚಾರಿಗಳನ್ನಾಗಿ ಹೇಗೆ ಮಾಡುತ್ತಾರೆ. ಇದು ಪತಿತ ಅಸುರಿ ಪ್ರಪಂಚ ರಾವಣರಾಜ್ಯವಾಗಿದೆ.

ರಾಜ್ಯವಂತು ಇಲ್ಲವೇ ಇಲ್ಲ. ರಾಮರಾಜ್ಯ ಮತ್ತು ರಾವಣ ರಾಜ್ಯವೆಂದು ಗಾಯನವಿದೆ. ಭಗವಂತ ಬಂದು ರಾಮರಾಜ್ಯ ಸ್ಥಾಪನೆ ಮಾಡುತ್ತಾರೆ. ಹೇ ಭಗವಂತ ಗೀತೆಯ ಜ್ಞಾನವನ್ನು ಮತ್ತೆ ಬಂದು ತಿಳಿಸಿ ಎಂದು ಹೇಳುತ್ತಾರೆ. ಕೃಷ್ಣನಂತು ಹೇಳುವುದಿಲ್ಲ. ನಮಗೆ ಯಾವುದೇ ಮನುಷ್ಯರು ಓದಿಸುತ್ತಿಲ್ಲ ಎಂಬುದನ್ನು ನೀವು ಮಕ್ಕಳು ತಿಳಿದಿದ್ದೀರಿ. ಮನುಷ್ಯಾತ್ಮರೇ ಓದುತ್ತಾರೆ. ಓದಿಸುವವರು ನಿರಾಕಾರ ಭಗವಂತನಾಗಿದ್ದಾರೆ. ಏನು ಮಾಡುತ್ತಾರೆ? ಮನುಷ್ಯರಿಂದ ದೇವತೆಯಾಗುವುದು ನಮ್ಮ ಗುರಿ ಧ್ಯೇಯವಾಗಿದೆ. ಶಾಲೆಯಲ್ಲಿ ಗುರಿ ಧ್ಯೇಯವಿಲ್ಲದೆ ಏನು ಓದಲು ಸಾಧ್ಯವಿದೆ. ನಾವು ಮತ್ತೆ ಮನುಷ್ಯನಿಂದ ದೇವತೆಯಾಗಲು ಬಂದಿದ್ದೇವೆ ಎಂಬುದು ನೀವು ಮಕ್ಕಳ ಬುದ್ಧಿಯಲ್ಲಿದೆ. ಓದಿಸುವವರನ್ನು ಸಹ ಪೂರ್ಣ ತಿಳಿದುಕೊಳ್ಳಬೇಕು. ಅವರ ಹೆಸರು ಶಿವ ಶರೀರದ ಹೆಸರಿಲ್ಲ, ಓದಿಸುವಂತವರು ಆತ್ಮರೇ ಆಗಿದ್ದಾರೆ, ಯಾರು ತಮ್ಮ-ತಮ್ಮ ಶರೀರದ ಮೂಲಕ ಓದಿಸುತ್ತಾರೆ. ಎಲ್ಲರಿಗೂ ತಮ್ಮ-ತಮ್ಮದೇ ಆದ ಶರೀರವಿದೆ, ಆದರೆ ಪರಂಪಿತ ಪರಮಾತ್ಮ ತಿಳಿಸುತ್ತಾರೆ ನನಗೆ ನನ್ನದೇ ಆದ ಶರೀರವಿಲ್ಲ. ನಾನು ಇವರ ( ಬ್ರಹ್ಮಾರವರ) ಆಧಾರವನ್ನು ತೆಗೆದುಕೊಳ್ಳುತ್ತೇನೆ. ಇವರ ಆತ್ಮನೂ ಸಹ ಓದುತ್ತದೆ ನಂತರ ಇವರೇ ನಂಬರ್ವನ್ದೇವತಾ ಆಗುತ್ತಾರೆ. ಯಾರು ಹೊಸ ವ್ಯಕ್ತಿ ಇದ್ದಂತವರು ಅವರೇ ಹಳೆಯ ವ್ಯಕ್ತಿಯಾಗುತ್ತಾರೆ. ಕೃಷ್ಣನೇ ಮೊದಲನೆಯ ಹೊಸ ವ್ಯಕ್ತಿ, ಪುನಃ ಎಂಭತ್ತನಾಲ್ಕು ಜನ್ಮಗಳನ್ನು ಪಡೆದು ಬ್ರಹ್ಮ ಆಗುತ್ತಾರೆ. ಇವರಿಗೆ ತನ್ನ ಜನ್ಮದ ರಹಸ್ಯ ತಿಳಿದಿಲ್ಲ, ಆ ಕಾರಣ ನಾನು ಬಂದು ತಿಳಿಸುತ್ತೇನೆ. ಮೊದಲನೇ ಜನ್ಮದಲ್ಲಿ ಇವರು ಶ್ರೀಕೃಷ್ಣ ಆಗಿದ್ದರು ನಂತರ ಪುನರ್ಜನ್ಮವನ್ನು ಪಡೆಯುತ್ತಾ ಪತಿತರಾದರು. ಈಗ

ಪುನಃ ನಾನು ಇವರನ್ನು ಬ್ರಹ್ಮನನ್ನಾಗಿ ಮಾಡಿ ನಂತರ ಶ್ರೀಕೃಷ್ಣನನ್ನಾಗಿ ಮಾಡುತ್ತೇನೆ. ವೃಕ್ಷದಲ್ಲೂ ಸಹ ಸ್ಪಷ್ಟವಾಗಿ ತಿಳಿಸಿದ್ದಾರೆ. ಕೆಳಗಡೆ ಬ್ರಾಹ್ಮಣ ರೂಪದಲ್ಲಿ ತಪಸ್ಸನ್ನು ಮಾಡುತ್ತಿದ್ದಾರೆ. ಮೇಲೆ ಇದೇ ಬ್ರಹ್ಮಾ ಪತಿತ ಜಗಿತ್ತಿನಲ್ಲಿ ನಿಂತಿದ್ದಾರೆ. ಹಾಗೂ ಈ ಸಂಗಮದಲ್ಲಿ ಈಗ ತಪಸ್ಸನ್ನು ಮಾಡುತ್ತಿದ್ದಾರೆ. ತತತ್ವಂ ಬ್ರಹ್ಮನೇ ದೇವತೆಯಾಗಿದ್ದರು ಪುನಃ ಪುನರ್ಜನ್ಮವನ್ನು ಪಡೆಯುತ್ತಾ-ಪಡೆಯುತ್ತಾ ಪತಿತ ಶೂದ್ರರಾಗುತ್ತಾರೆ. ಈಗ ಪುನಃ ಪಾವನರಾಗುತ್ತೇವೆ. ನಾವು ತಿಳಿದುಕೊಂಡಿದ್ದೇವೆ ಪತಿತ ಪಾವನರಾಗುತ್ತಾರೆ. ಪರಮಪಿತ ಪರಮಾತ್ಮನ ಮುಖಾಂತರ ಪಾವನರಾಗುತ್ತಿದ್ದೇವೆ. ತಂದೆ ಉಪಾಯವನ್ನು ತಿಳಿಸುತ್ತಾರೆ. ನನ್ನನ್ನು ನೆನಪು ಮಾಡಿ. ನನ್ನನ್ನು ನೆನಪು ಮಾಡುವುದರಿಂದಲೇ ನೀವು ಪಾವನರಾಗುತ್ತೀರಿ. ಸತ್ಯಯುಗದಲ್ಲಿ ಆತ್ಮ ಹಾಗೂ ಶರೀರ ಪಾವನವಿರುತ್ತದೆ. ಇಲ್ಲಿ ಎಲ್ಲರ ಶರೀರ ಪತಿತವಾಗಿದೆ. ಎಲ್ಲದಕ್ಕಿಂತ ಕೆಟ್ಟ ಭ್ರಷ್ಟಾಚಾರ ಕಾಮ ವಿಕಾರವಾಗಿದೆ. ವಿಕಾರದಿಂದ ಜನ್ಮವನ್ನು ಪಡೆಯುವಂತವರಿಗೆ ಭ್ರಷ್ಟಾಚಾರಿಗಳೆಂದು ಹೇಳುತ್ತಾರೆ. ಸತ್ಯಯುಗದಲ್ಲಿ ಯಾರೂ ಸಹ ಭ್ರಷ್ಟಾಚಾರಿಗಳು ಇರುವುದಿಲ್ಲ ಏಕೆಂದರೆ ಅಲ್ಲಿ ವಿಷ(ವಿಕಾರ) ಇರುವುದಿಲ್ಲ. ಕೃಷ್ಣನಿಗೆ ಸಂಪೂರ್ಣ ನಿರ್ವಿಕಾರಿ ಎಂದು ಹೇಳಲಾಗುತ್ತದೆ. ಪುನಃ ನಿರ್ವಿಕಾರಿಗಳೇ ವಿಕಾರಿಗಳಾಗುತ್ತಾರೆ. ಸತ್ಯಯುಗ, ತ್ರೇತಾಯುಗದಲ್ಲಿ ವಿಕಾರ ಎನ್ನುವುದು ಇರುವುದಿಲ್ಲ. ಆ ಕಾರಣ ತಂದೆ ತಿಳಿಸುತ್ತಾರೆ ಮಕ್ಕಳೇ ಈ ಐದು ಭೂತಗಳ ಮೇಲೆ ವಿಜಯವನ್ನು ಪಡೆಯಿರಿ. ತಂದೆ ಬಂದು ವಿಕಾರಿ ಜಗತ್ತನ್ನು ನಿರ್ವಿಕಾರಿಯನ್ನಾಗಿ ಮಾಡುತ್ತಾರೆ. ಕೆಲವರು ಈ ರೀತಿ ಇರುತ್ತಾರೆ ಧಾರಣೆಯು ಆಗುವುದಿಲ್ಲ. ಕ್ರೋಧದ ಭೂತ, ಮೋಹದ ಭೂತ, ಲೋಭದ ಭೂತ ತಕ್ಷಣ ಕಪ್ಪಾಗಿ ಮಾಡಿ ಬಿಡುತ್ತದೆ. ಎಲ್ಲದಕ್ಕಿಂತ ಕೆಟ್ಟದ್ದು ಕಾಮ ವಿಕಾರ. ಈ ಕಾಮ ವಿಕಾರವೂ ಸಹ ದೇಹಾಭಿಮಾನದಲ್ಲಿ ಬಂದಾಗ ಬರುತ್ತದೆ. ತಮ್ಮನ್ನು ಆತ್ಮನೆಂದು ತಿಳಿದುಕೊಳ್ಳಿ ಎಂದು ತಂದೆ ತಿಳಿಸುತ್ತಾರೆ. ಆತ್ಮದಲ್ಲಿಯೇ ಜ್ಞಾನದ ಸಂಸ್ಕಾರವಿರುತ್ತದೆ. ಈಗ ಆತ್ಮ ಜ್ಞಾನದ ಸಂಸ್ಕಾರ ಸಂಪೂರ್ಣ ಮರೆತು ಹೋಗಿದೆ.

ನನ್ನನ್ನು ನೆನಪು ಮಾಡಿ ಎಂದು ತಂದೆ ಹೇಳುತ್ತಾರೆ. ಮನುಷ್ಯರು ಸಾಕಾರದವರನ್ನೇ ನೆನಪು ಮಾಡುತ್ತಾರೆ. ಭಕ್ತಿಯಲ್ಲಿ ಬಂಧಿಸಲ್ಪಟ್ಟಿದ್ದಾರೆ. ಗುರು ಮೊದಲಾದವರನ್ನು ಅಥವಾ ದೇವತೆಗಳನ್ನು ನೆನಪು ಮಾಡುತ್ತಾರೆ. ಬದಿರೀನಾಥ, ಅಮರನಾಥಕ್ಕೆ ಹೋಗಿ ಕಲ್ಲುಗಳಿಗೆ ಪೂಜೆ ಮಾಡುತ್ತಾರೆ. ಶಿವನ ಮಂದಿರಕ್ಕೆ ಹೋದರೂ ಸಹ ಇವರು ನಮ್ಮ ತಂದೆ ಆಗಿದ್ದಾರೆಂದು ಯಾರೂ ತಿಳಿದುಕೊಂಡಿಲ್ಲ. ಆದುದರಿಂದ ಇದು ಅಂಧಶ್ರದ್ಧೆ ಎಂದು ಕರೆಯಲಾಗುತ್ತದೆ. ತಂದೆ ಹೇಗೆ, ಯಾವಾಗ ಬರುತ್ತಾರೆಂದು ಯಾರೂ ತಿಳಿದುಕೊಂಡಿಲ್ಲ. ಈಗ ಮಕ್ಕಳಿಗೆ ಎಲ್ಲವನ್ನು ತಿಳಿಸಲಾಗಿದೆ. ಆದರೆ ನಿಮ್ಮಲ್ಲಿಯೂ ಸಹ ಕೆಲವರು ಮಾತ್ರ ಬುದ್ಧಿವಂತರು, ಪ್ರಾಮಾಣಿಕರು, ಆಜ್ಞಾಕಾರಿ ಮಕ್ಕಳಿದ್ದಾರೆ. ಈ ಮಕ್ಕಳಲ್ಲಿ ಯಾವ ಭೂತಗಳ ಪ್ರವೇಶತೆ ಇರುವುದಿಲ್ಲ. ಭೂತಗಳು ಪ್ರವೇಶತೆ ಆಗಿರುವವರು ಬಹಳ ದುಃಖ ಕೊಡುತ್ತಾರೆ. ಬಹಳ ಡಿಸ್ಸರ್ವೀಸನ್ನು ಮಾಡುತ್ತಾ ಬಹಳ ಕಡಿಮೆ ಪದವಿಯನ್ನು ಪಡೆಯುತ್ತಾರೆ. ಪುಣ್ಯಾತ್ಮರಾಗುವ ಬದಲು ಇನ್ನೂ ಪಾಪಾತ್ಮರಾಗುತ್ತಾರೆ. ಒಂದು ದೇಹಾಭಿಮಾನ ಮತ್ತು ಇದರ ಜೊತೆ ಎಲ್ಲಾ ವಿಕಾರಗಳು ಬರುತ್ತವೆ. ಲೋಭಕ್ಕು ಭೂತವೆಂದು ಕರೆಯಲಾಗುತ್ತದೆ. ಯಾವುದಾದರು ತಿನ್ನುವ ವಸ್ತುವನ್ನು ನೋಡಿದರೆ ಮನಸ್ಸಾಗುತ್ತದೆ, ಈ ರೀತಿ ಲೋಭದ ಭೂತ ಪ್ರತ್ಯಕ್ಷವಾಗುತ್ತದೆ. ಇದು ಆರಂಭದಿಂದಲೂ ತನ್ನ ಕೆಲಸವನ್ನು ಮಾಡುತ್ತಿರುತ್ತದೆ. ಅರ್ಧಕಲ್ಪ ಈ ಭೂತಗಳು ದುಃಖಿಯನ್ನಾಗಿ ಮಾಡಿವೆ. ಯಾರು ತಮ್ಮನ್ನು ಪುಣ್ಯಾತ್ಮರಾಗುತ್ತೇವೆಂದು ಹೇಳಿಕೊಳ್ಳುತ್ತಾರೆ, ಅವರೇ ಪಾಪಾತ್ಮರಾಗುತ್ತಾ ಬೇರೆಯವರನ್ನು ಪಾಪಾತ್ಮರನ್ನಾಗಿ ಮಾಡುತ್ತಾರೆ. ಹೆಸರಿಗೆ ಕಳಂಕ ತರುತ್ತಾರೆ. ಒಂದುವೇಳೆ ನಿಮ್ಮಲ್ಲಿಯೂ ಸಹ ಕ್ರೋಧದ ಭೂತವಿದ್ದಾಗ ಬೇರೆಯವರಿಗೆ ಕ್ರೋಧವನ್ನು ಬಿಡಿ ಎಂದು ಹೇಳಲು ಆಗುವುದಿಲ್ಲ. ಯಾವುದಾದರು ದೇಹಾಭಿಮಾನದ ನಡವಳಿಕೆ ನೋಡಿದಾಗ ತಂದೆಗೆ ತಿಳಿಸಬೇಕು. ಧರ್ಮರಾಜನ ಬಳಿ ಎಲ್ಲಾ ಲೆಕ್ಕಾಚಾರವಿರುವ ಕಾರಣ ಶಿಕ್ಷೆಯ ಸಮಯದಲ್ಲಿ ಎಲ್ಲವನ್ನು ಸಾಕ್ಷಾತ್ಕಾರ ಮಾಡಿಸುತ್ತಾನೆ ಹಾಗೂ ನೀವು ಈ ರೀತಿ ಭೂತಗಳಿಗೆ ವಶವಾಗಿ ನೀವು ಅನೇಕರಿಗೆ ದುಃಖ ಕೊಟ್ಟಿದ್ದೀರೆಂದು ಹೇಳಲಾಗುತ್ತದೆ. ಕೆಲವು ಮಕ್ಕಳು ಕ್ರೋಧಾಗ್ನಿಯಲ್ಲಿಯೇ ಮುಳಗಿ ಸಮಾಪ್ತಿಯಾಗಿಬಿಡುತ್ತಾರೆ. ಇಂತಹವರ ಆತ್ಮ ಸಂಪೂರ್ಣ ಕಪ್ಪು (ಪತಿತ) ಆಗಿಬಿಡುತ್ತದೆ. ಡಿಸ್ಸರ್ವೀಸ್ ಮಾಡುವಂತಹವರಿಗೆ ತಂದೆ ಬುದ್ಧಿಗೆ ಬೀಗ ಹಾಕುತ್ತಾರೆ. ಅಂತಹವರಿಂದ ಯಾವ ಸೇವೆಯೂ ನಡೆಯುವುದಿಲ್ಲ. ಅಂತ್ಯದಲ್ಲಿ ತಂದೆ ಸಾಕ್ಷಾತ್ಕಾರ ಮಾಡಿಸಿದಾಗ ದುಃಖಿಗಳಾಗುತ್ತೀರಿ. ಆದುದರಿಂದ ಮಕ್ಕಳು ಇಂತಹ ಯಾವ ಕರ್ಮವನ್ನೂ ಸಹ ಮಾಡಬಾರದು. ಆದುದರಿಂದ ತಂದೆಯು ಯಾರಾದರು ಉಲ್ಟಾ ನಡೆವಳಿಕೆ ನಡೆದುಕೊಂಡರೆ ನನಗೆ ತಿಳಿಸಬೇಕೆಂದು ಹೇಳುತ್ತಾರೆ. ಇಂತಹವರು ದೇಹಾಭಿಮಾನದ ಕಾರಣ ದಾಸ-ದಾಸಿಯರಾಗುತ್ತಾರೆ ಎಂದು ತಂದೆ ತಿಳಿದುಕೊಳ್ಳುತ್ತಾರೆ. ಇಂತಹವರು ಪ್ರಜೆಯಲ್ಲಿಯೂ ಬಹಳ ಕಡಿಮೆ ಪದವಿಯನ್ನು ಪಡೆಯುತ್ತಾರೆ. ತಂದೆ ಮಕ್ಕಳಿಗೆ ಜ್ಞಾನರತ್ನಗಳಿಂದ ಶೃಂಗಾರ ಮಾಡುತ್ತಿದ್ದರೂ ಸಹ ಮಕ್ಕಳು ಸುಧಾರಣೆ ಆಗುವುದೇ ಇಲ್ಲ. ಈ ಸಮಯದಲ್ಲಿ ಪರಮಪಿತ ಪರಮಾತ್ಮ ಜ್ಞಾನದ ಶೃಂಗಾರ ಮಾಡಿ ಸತ್ಯಯುಗದ ಮಹಾರಾಜಾ-ಮಹಾರಾಣಿ ಮಾಡುತ್ತಾರೆ. ಮಹಾರಾಜಾ-ಮಹಾರಾಣಿ ಆಗಲು ಬಹಳ ಸಹನಶೀಲರಾಗಬೇಕು. ದೇಹದ ಪ್ರತಿಯಾಗಿ ಅತಿಯಾದ ಮೋಹವಿರಬಾರದು. ಯೋಗಬಲದಿಂದ ಎಲ್ಲವನ್ನು ಮಾಡಬೇಕು. ತಂದೆಯೂ ಸಹ ವೃದ್ಧರಾಗಿದ್ದಾರೆ. ಆದರೂ ಸಹ ಯೋಗದಲ್ಲಿ ಬಹಳ ಗಮನವಿರುತ್ತದೆ. ಆರೋಗ್ಯ ಸರಿಯಿಲ್ಲದಿದ್ದರು ಸೇವೆಯಲ್ಲಿರುತ್ತಾರೆ. ಈ ಬುದ್ಧಿಯೂ ಸಹ ಎಷ್ಟೊಂದು ಸೇವೆ ಮಾಡಬೇಕಾಗುತ್ತದೆ. ಮಕ್ಕಳನ್ನು ಪಾಲನೆ ಮಾಡುವುದು, ಅತಿಥಿಗಳನ್ನು ನೋಡಿಕೊಳ್ಳುವುದು ಈ ರೀತಿ ಎಷ್ಟು ಹೊರೆ ಇರುತ್ತದೆ. ಬಹಳ ಆಲೋಚನೆಗಳು ನಡೆಯುತ್ತಿರುತ್ತವೆ. ಒಂದುವೇಳೆ ಯಾವುದಾದರು ಮಗು ತಂದೆ ತಾಯಿಯ ಆಜ್ಞೆಯಂತೆ ನಡೆಯದೆ ಅವರ ಹೆಸರಿಗೆ ಕಳಂಕವನ್ನು ತರುತ್ತಾರೆ, ಆಗ ಇವರು ಎಂತಹ ಬ್ರಹ್ಮಾಕುಮಾರಿ ಎಂದು ಹೇಳುವಂತಾಗುತ್ತದೆ. ಬ್ರಹ್ಮಾತಂದೆ ಹೆಸರು

ಬರುತ್ತದೆಯಲ್ಲವೆ, ಆದುದರಿಂದ ಇವರನ್ನು ಗುರು ನಾನಕರೆಂದು ಕರೆಯಲಾಗುವುದು....ಇದು ಶಿವತಂದೆ ಸದ್ಗುರುವಿಗಾಗಿ ಹೇಳಿರುವ ಮಾತು. ಆದರೆ ಇದನ್ನು ಕಲಿಯುಗೀ ಗುರುಗಳು ತಮಗೆ ಹೋಲಿಸಿಕೊಂಡಿದ್ದಾರೆ. ಆದುದರಿಂದ ಪ್ರಪಂಚದ ಮನುಷ್ಯರು ಗುರುಗಳು ನಮಗೆ ಶಾಪ ಕೊಡುತ್ತಾರೆಂದು ಭಯಪಡುತ್ತಾರೆ. ಆದರೆ ಅಂತಹ ಮಾತೇನಿಲ್ಲ. ತಮ್ಮ ಚಲನೆಯಿಂದ ತಮಗೆ ತಾವೇ ಶಾಪಗ್ರಸ್ತರಾಗುತ್ತಾರೆ. ಮಕ್ಕಳಿಗೆ ತಮ್ಮ ಭವಿಷ್ಯದ ಯೋಚನೆ ಇರಬೇಕು. ಈಗ ಪುರುಷಾರ್ಥ ಮಾಡುವುದಿಲ್ಲವೆಂದರೆ ಕಲ್ಪ-ಕಲ್ಪವೂ ಸಹ ಅದೇ ರೀತಿ ಆಗುತ್ತದೆ. ಇದು ಎಷ್ಟೊಂದು ಉತ್ತಮವಾದ ಮಾರ್ಗದರ್ಶನವಾಗಿದೆ, ಆದರೂ ಸಹ ಮಕ್ಕಳು ತಮ್ಮ ಮುಖವನ್ನು ಕಪ್ಪು ಮಾಡಿಕೊಳ್ಳದೆ ಇರುವುದಿಲ್ಲ. ಮಾಯೆಗೆ ವಶವಾಗುತ್ತಾರೆ, ಅಥವಾ ಸತ್ತು ವಿಷದ ಸಾಗರದಲ್ಲಿ ಮುಳಗಿಬಿಡುತ್ತಾರೆ. ವಿದ್ಯೆಯನ್ನೂ ಸಹ ಓದುವುದಿಲ್ಲ. ಕೆಲವು ಮಕ್ಕಳಂತು ಬಹಳ ಚೆನ್ನಾಗಿ ನಡೆದುಕೊಳ್ಳುತ್ತಾರೆ. ಇನ್ನು ಕೆಲವರು ಈಶ್ವರೀಯ ಜನ್ಮ ಪಡೆದ 8-10 ವರ್ಷಗಳ ನಂತರ ಮಾಯೆಗೆ ವಶರಾಗುತ್ತಾರೆ ಅಥವಾ ತಂದೆಗೆ ವಿಚ್ಛೇದನೆ ಕೊಡುತ್ತಾರೆ. ಲೌಕಿಕ ತಂದೆಗೂ ಸಹ ಸುಪುತ್ರ ಮಕ್ಕಳನ್ನು ನೋಡಿ ಖುಷಿಯಾಗುತ್ತದೆ. ಆದರೂ ಸಹ ಮಕ್ಕಳಲ್ಲಿ ನಂಬರ್ವಾರ್ಇದ್ದಾರಲ್ಲವೆ. ಕೆಲವು ಮಕ್ಕಳು ಸೇವಾಕೇಂದ್ರಗಳಲ್ಲಿ ದುಃಖವನ್ನು ಕೊಡುತ್ತಾ ದೊಡ್ಡ ಮುಳ್ಳಾಗಿರುತ್ತಾರೆ. ಮನೆ ಮಕ್ಕಳಾಗಿ ಬಹಳ ನಿಂದನೆ ಮಾಡಿಸುತ್ತಾ ಬಹಳ ಪಾಪಾತ್ಮರಾಗುತ್ತಾರೆ. ಆದ್ದರಿಂದ ಬೇಹದ್ದಿನ ತಂದೆಯಿಂದ ಬೇಹದ್ದಿನ ಆಸ್ತಿಯನ್ನು ನೀವು ಇಲ್ಲಿ ತೆಗೆದುಕೊಳ್ಳಲು ಬಂದಿರುವ ಕಾರಣ ನಿಮ್ಮಲ್ಲಿರುವ ಬಲಹೀನತೆಗಳನ್ನು ಬಿಡಬೇಕು. ಹೇಗೆ ಶಾಲೆಯಲ್ಲಿ ಓದುವ ಮಕ್ಕಳು ಹಠದಿಂದ 80-90 ಅಂಕಗಳನ್ನು ಪಡೆದು ತೇರ್ಗಡೆಯಾದಾಗ ಖುಷಿಯಾಗಿ ಪರಸ್ಪರ ಎಲ್ಲರು ಅವರಿಗೆ ಅಭಿನಂದನೆಗಳನ್ನು ನೀಡುತ್ತಾರೆ. ಆದರೆ ಇದು ಬೇಹದ್ದಿನ ವಿದ್ಯೆಯಾಗಿದೆ. ಯಾರು, ಯಾರು ಸೂರ್ಯವಂಶದವರಾಗುತ್ತಾರೆ, ಹಾಗೂ ಯಾರು, ಯಾರು ಚಂದ್ರವಂಶದವರು ಆಗುತ್ತಾರೆಂದು ತಿಳಿಯುತ್ತದೆ. ಚಂದ್ರವಂಶದಲ್ಲಿ ರಾಜಾ- ರಾಣಿ ಆಗುವವರ ಮುಂದೆ ಮೊದಲು ಸೂರ್ಯವಂಶದವರು ಆಗಿದ್ದಂತಹವರು ಎರಡನೇಯ ಸ್ಥಾನವನ್ನು ಪಡೆದುಕೊಳ್ಳುತ್ತಾರೆ. ರಾಮ- ಸೀತೆ ರಾಜ್ಯ ಮಾಡುವಾಗ ಲಕ್ಷ್ಮೀ-ನಾರಾಯಣರು ಅವರಿಗಿಂತ ಚಿಕ್ಕವರಾಗಿರುತ್ತಾರೆ. ಆಗ ಸೂರ್ಯವಂಶದ ಹೆಸರೂ ಸಹ ಸಮಾಪ್ತಿಯಾಗುತ್ತದೆ. ಈ ಜ್ಞಾನ ಬಹಳ ರಮಣೀಕವಾದ ಜ್ಞಾನವಾಗಿದೆ. ಯಾರು ಶ್ರೀಮತದಂತೆ ನಡೆಯುತ್ತಾರೆ, ಅವರಿಗೆ ಮಾತ್ರ ಜ್ಞಾನ ಧಾರಣೆಯಾಗಿ ಶ್ರೇಷ್ಠ ಪದವಿಯನ್ನು ಪಡೆದುಕೊಳ್ಳುತ್ತಾರೆ. ಶಿವತಂದೆಗೆ ಭಕ್ತಿ ಹಾಗೂ ಜ್ಞಾನಮಾರ್ಗ ಎರಡರಲ್ಲಿಯೂ ಪಾತ್ರವಿದೆ. ಶಂಕರನ ಪಾತ್ರ ಕೇವಲ ವಿನಾಶ ಮಾಡುವುದಾಗಿದೆ. ಆ ವಿನಾಶದ ಪಾತ್ರವನ್ನು ಏನೆಂದು ವರ್ಣನೆ ಮಾಡುತ್ತೀರಿ. ಶಿವತಂದೆ ಹಾಗೂ ಬ್ರಹ್ಮಾತಂದೆಯನ್ನು ಕುರಿತು ಬಹಳ ವರ್ಣನೆ ಇದೆ. 84 ಜನ್ಮಗಳ ಚಕ್ರದಲ್ಲಿ ಎಲ್ಲಕ್ಕಿಂತ ನಂಬರ್ವನ್ ಪಾತ್ರ ಬ್ರಹ್ಮಾ ತಂದೆಯದಾಗಿದೆ. ಆದರೆ ಅವರು ಶಿವಶಂಕರನನ್ನು ಒಂದೇ ಎಂದು ಹೇಳುತ್ತಾರೆ. ಶಿವ ತಂದೆಯ ಪಾತ್ರ ಎಲ್ಲಕ್ಕಿಂತ ಶ್ರೇಷ್ಠ ಹಾಗೂ ವಿಸ್ತಾರವಾದ ಪಾತ್ರವಾಗಿದೆ. ಎಲ್ಲಾ ಮಕ್ಕಳನ್ನು ಸುಖಿಗಳನ್ನಾಗಿ ಮಾಡುವುದು ಎಷ್ಟೊಂದು ಶ್ರಮದ ಮಾತಾಗಿದೆ. ನಂತರ ತಂದೆ ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಾರೆ. ಇವರು (ಬ್ರಹ್ಮತಂದೆ) 84 ಜನ್ಮಗಳ ಪಾತ್ರವನ್ನು ಮಾಡುತ್ತಾರೆ. ಇಸ್ಲಾಮಿ, ಬೌದ್ಧ ಧರ್ಮಗಳು ನಂತರ ಬರುತ್ತವೆ. ಈ ಧರ್ಮದವರು ಆಲ್ರೌಂಡ್ ಪಾತ್ರವನ್ನು ಮಾಡುವುದಿಲ್ಲ. ಆಲ್ರೌಂಡ್ ಪಾತ್ರ ಮಾಡುವವರಿಗೆ ಅಧಿಕ ಸುಖವು ಪ್ರಾಪ್ತಿಯಾಗುತ್ತದೆ ನಾವೇ ಆ ಸ್ವರ್ಗದ ಮಾಲೀಕರಾಗುತ್ತೇವೆ.

ಭಾರತವನ್ನೇ ಆ ಸ್ವರ್ಗವೆಂದು ಕರೆಯಲಾಗುತ್ತದೆ. ನಾವು ನಮಗಾಗಿ ಸ್ವರ್ಗ ಸ್ಥಾಪನೆ ಮಾಡುವುದು ಎಷ್ಟೊಂದು ಖುಷಿಯ ಮಾತಾಗಿದೆ. ಈ ರೀತಿ ಇದನ್ನು ಅನ್ಯರಿಗು ತಿಳಿಸಿದಾಗ ಅವರೂ ಸಹ ತಮ್ಮ ಜೀವನವನ್ನು ಮಾಡಿಕೊಳ್ಳಬಹುದು. ನೀವು ಪರಮಪಿತ ಪರಮಾತ್ಮನಿಂದ ಸ್ವರ್ಗದ ಆಸ್ತಿಯನ್ನು ಪಡೆಯುವ ಸಲುವಾಗಿ ಬಂದಿದ್ದೀರಿ. ಒಂದುವೇಳೆ ಬುದ್ಧಿಯಲ್ಲಿ ನಮ್ಮ ಜೀವನದ ಗುರಿ ಉದ್ದೇಶ ನೆನಪಿಲ್ಲದೆ ಇಲ್ಲಿ ಕುಳಿತುಕೊಂಡು ಏನೂ ಮಾಡಲು ಸಾಧ್ಯವಿಲ್ಲ. ಬ್ರಾಹ್ಮಣರು ಬ್ರಹ್ಮನ ಮುಖವಂಶಾವಳಿ ಆಗಿದ್ದಾರೆ. ಬೇಹದ್ದಿನ ತಂದೆ, ನಾವು ಬೇಹದ್ದಿನ ಮಕ್ಕಳಾಗಿದ್ದೇವೆ. ಇಲ್ಲಿ ತಂದೆಗೆ ಅಸಂಖ್ಯವಾದ ಮಕ್ಕಳಿದ್ದಾರೆ. ಬ್ರಹ್ಮನಿಗೆ ಮಕ್ಕಳಾಗದೆ ಶಿವನಿಂದ ಆಸ್ತಿ ಸಿಗುವುದಿಲ್ಲ. ಭಾರತ ಶ್ರೇಷ್ಠಾಚಾರಿಯಾಗಿತ್ತು, ಆಗ ಯಾವುದೇ ಭೂತವಿರಲಿಲ್ಲ. ಒಂದು ಭೂತವಿದ್ದರೂ ಸಹ ವ್ಯಭಿಚಾರಿ ಎಂದು ಹೇಳಲಾಗುವುದು. ಸಂಪೂರ್ಣವಾಗಿ ಭೂತಗಳನ್ನು ಓಡಿಸಬೇಕು. ಬಾಬಾ ಕಾಮದ ಭೂತ ಬಂದರೂ ಸಹ ನಾನು ವಿಜಯಿಯಾದೆ ಎಂದು ಮಕ್ಕಳು ತಂದೆಗೆ ಪತ್ರ ಬರೆಯುತ್ತಾರೆ. ಆಗ ತಂದೆಯೂ ಮಕ್ಕಳೇ ಅನೇಕ ಬಿರುಗಾಳಿಗಳು ಬರುತ್ತವೆ, ಆದರೆ ಕರ್ಮೇಂದ್ರಿಯಗಳಿಂದ ಯಾವ ಕರ್ಮ ಮಾಡಬಾರದು. ಭೂತಗಳನ್ನು ಓಡಿಸಬೇಕು. ಇಲ್ಲವೆಂದರೆ ಸೂರ್ಯವಂಶ ಹಾಗೂ ಚಂದ್ರವಂಶದವರು ಆಗಲು ಸಾಧ್ಯವಿಲ್ಲ. ಧ್ಯಾನದಲ್ಲಿ ಹೋಗುವುದು ಸಹ ಒಳ್ಳೆಯದಲ್ಲ, ಏಕೆಂದರೆ ಧ್ಯಾನದಲ್ಲಿ ಮಾಯೆಯು ಪ್ರವೇಶವಾಗುತ್ತದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಕರ್ಮೇಂದ್ರಿಯಗಳಿಂದ ಯಾವ ವಿಕರ್ಮವನ್ನು ಮಾಡಬಾರದು. ಅನೇಕರಿಂದ ಶಾಪ ಸಿಗುವಂತಹ ರೀತಿಯಲ್ಲಿ

ನಡೆದುಕೊಳ್ಳಬಾರದು. ತಮ್ಮ ಭವಿಷ್ಯದ ಬಗ್ಗೆ ಯೋಚನೆ ಮಾಡಿ ಪುಣ್ಯ ಕರ್ಮವನ್ನು ಮಾಡಬೇಕು.

2. ಆಂತರ್ಯದಲ್ಲಿ ಇರುವಂತಹ ಕಪ್ಪುತನ, ದೇಹಾಭಿಮಾನದ ಕಾರಣ ಭೂತಗಳ ಪ್ರವೇಶತೆ.... ಈ ಎಲ್ಲವನ್ನು ತೆಗೆದು ಹಾಕಬೇಕು. ಜ್ಞಾನದಿಂದ ತಮ್ಮ ಶೃಂಗಾರ ಮಾಡಿಕೊಂಡು ಸುಪುತ್ರ ಮಗು ಆಗಬೇಕು.

ವರದಾನ: ಬ್ಯುಸಿಯಾಗಿರುವ ಸಹಜ ಪುರುಷಾರ್ಥದ ಮೂಲಕ ನಿರಂತರ ಯೋಗಿ, ನಿರಂತರ ಸೇವಾಧಾರಿ ಭವ.

ಬ್ರಾಹ್ಮಣ ಜನ್ಮವಿರುವುದೇ ಸದಾ ಸೇವೆಗಾಗಿ. ಸೇವೆಯಲ್ಲಿ ಎಷ್ಟು ಬ್ಯುಸಿಯಾಗಿರುತ್ತೀರಿ ಅಷ್ಟು ಸಹಜವಾಗಿಯೇ ಮಾಯಾಜೀತರಾಗುವಿರಿ. ಆದ್ದರಿಂದ ಬುದ್ಧಿಗೆ ಸ್ವಲ್ಪವೇನಾದರೂ ಸಮಯ ಸಿಕ್ಕಿತೆಂದರೆ ಸೇವೆಯಲ್ಲಿ ತೊಡಗಿಸಿ ಬಿಡಿ. ಸಮಯವನ್ನು ಸೇವೆಯಲ್ಲಿ ಬಿಟ್ಟು ವ್ಯರ್ಥವಾಗಿ ಕಳೆಯಬಾರದು. ಭಲೆ ಸಂಕಲ್ಪದಿಂದ ಸೇವೆ ಮಾಡಿ, ವಾಣಿಯಿಂದ ಮಾಡಿರಿ ಅಥವ ಕರ್ಮದಿಂದ ಮಾಡಿರಿ. ತಮ್ಮ ಸಂಪರ್ಕ ಮತ್ತು ಚಲನೆಯಿಂದಲೂ ಸೇವೆ ಮಾಡಬಹುದು. ಇದರಲ್ಲಿ ಬ್ಯುಸಿಯಾಗಿರುವುದೇ ಸಹಜ ಪುರುಷಾರ್ಥವಾಗಿದೆ. ಬ್ಯುಸಿಯಾಗಿದ್ದರೆ ಯುದ್ಧದಿಂದ ಮುಕ್ತರಾಗುತ್ತಾ, ನಿರಂತರ ಯೋಗಿ ನಿರಂತರ ಸೇವಾಧಾರಿ ಆಗಿ ಬಿಡುವಿರಿ.

ಸ್ಲೋಗನ್: ಆತ್ಮವನ್ನು ಸದಾ ಆರೋಗ್ಯವಂತನನ್ನಾಗಿ ಇಡಬೇಕೆಂದರೆ ಖುಷಿಯ ಔಷಧಿಯನ್ನು ಸೇವನೆ ಮಾಡಿಸುತ್ತಿರಿ.